

BENNETT, COLEMAN & CO. LTD. | ESTABLISHED 1838 | TIMESOFINDIA.COM | EPAPER.TIMESOFINDIA.COM MANGALURU | THURSDAY, DECEMBER 21, 2017 | PAGES 22 | PRICE ₹ 4.50

THE TIMES OF INDIA

# Scientists to interact with students

Times News Network

**Mangaluru:** Gen Y from Namma Kudla will get to interact with Nobel laureates and eminent scientists at the maiden Sahyadri conclave on science, technology and management at Adyar from January 6, 2018.

The Bhandary Foundation that manages the Sahyadri College of Engineering and Management has organized the conclave.

Primary purpose of the conclave is to instil in young minds the spirit of scientific inquiry through motivating interactions with Nobel Laureates including Ada E Yonath and Serge Haraoche, and scientists. It will also help them in career guidance towards science and technology.

About 1,200 students from highschools to post graduation, will participate in the conclave.

ಸಂಪುಟ 59 | ಸಂಚಿಕೆ 306 | ಪುಟ 12+4
epaper.samyukthakarnataka.com
ಮಂಗಳೂರು | ಹುಬ್ಬಳ್ಳಿ | ಕಲಬುರಗಿ

# ಸಂಯುಕ್ತ ಕರ್ನಾಟಕ

ಕನ್ನಡಿಗರ ಸಾಕ್ಷಿಪ್ರಜ್ಞೆ

ಎಂಟು ದಶಕದ ನಂಟು



ಮುಂಬೈನಲ್ಲಿ ಬುಧವಾರ ನಡೆದ ಕಾರ್ಯಕ್ರಮವೊಂದರಲ್ಲಿ ಬಾಲಿವುಡ್ ನಟಿ ರಾಧಿಕಾ ಆಪ್ಟೆ ಭಾಗವಹಿಸಿದ್ದರು.

ಗುರುವಾರ 21 | ಡಿಸೆಂಬರ್ 2017 | ₹5-00

ಭೋಪಾಲ್‌ನ ಇಂದಿರಾ ಗಾಂಧಿ ರಾಷ್ಟ್ರೀಯ ಮ್ಯೂಸಿಯಂನಲ್ಲಿ ನಡೆದ ರಾಷ್ಟ್ರೀಯ ಬಾಲರಂಗ ಹಬ್ಬ 2017ರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಿಕ್ಕಿಂ ಚಿಣ್ಣರು.

CENTRAL LIBRARY

## ಜ. 6ರಿಂದ 'ಸಹ್ಯಾದ್ರಿ ಸಮಾವೇಶ'

**ಮಂಗಳೂರು:** ಸಹ್ಯಾದ್ರಿ ಕಾಲೇಜು ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನಲ್ಲಿ ಜ.6ರಿಂದ 10ರವರೆಗೆ ಅಡ್ಯಾರಿನ ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ವಿಜ್ಞಾನ ವಿಷಯದಲ್ಲಿ 'ಸಹ್ಯಾದ್ರಿ ಸಮಾವೇಶ' ನಡೆಯಲಿದ್ದು, ಇದೇ ಮೊದಲ ಬಾರಿಗೆ ವಿಜ್ಞಾನ ವಿಷಯ ಕುರಿತು ಸಮಾವೇಶ ಏರ್ಪಡಿಸುತ್ತಿದೆ. ಆ ಮೂಲಕ ಯುವ ಜನಾಂಗಕ್ಕೆ ನೊಬೆಲ್ ಪುರಸ್ಕೃತರು ಅಂತಾರಾಷ್ಟ್ರೀಯ ಮಟ್ಟದ ವಿಜ್ಞಾನಿಗಳು ಹಾಗೂ ಕೈಗಾರಿಕೋದ್ಯಮಿಗಳನ್ನು ಭೇಟಿಯಾಗುವ ಹಾಗೂ ಅವರ ಜತೆ ಚರ್ಚಿಸುವ ಅವಕಾಶ ಕಲ್ಪಿಸಿದೆ.

ನೊಬೆಲ್ ಪ್ರಶಸ್ತಿ ಪುರಸ್ಕೃತರು ಹಾಗೂ ವಿಜ್ಞಾನಿಗಳ ಜತೆ ಚರ್ಚಿಸುವಂತೆ ವಿದ್ಯಾರ್ಥಿಗಳು ಹಾಗೂ ಯುವ ಮನಸ್ಸುಗಳನ್ನು ಪ್ರೇರೇಪಿಸುವುದು, ವಿದ್ಯಾರ್ಥಿಗಳು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಉದ್ಯೋಗ ಕಂಡುಕೊಳ್ಳಲು ಸಹಾಯವಾಗುವಂತೆ ಮಾಡುವುದು ಈ ಸಮಾವೇಶದ ಪ್ರಾಥಮಿಕ ಉದ್ದೇಶವಾಗಿದ್ದುದೆ ಎಂದು ಸಹ್ಯಾದ್ರಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಮಂಜುನಾಥ ಭಂಡಾರಿ ಸುದ್ದಿಗಾರರಿಗೆ ತಿಳಿಸಿದ್ದಾರೆ.




'ಸಹ್ಯಾದ್ರಿ ಸಮಾವೇಶ' ದ ಬ್ರೋಶರ್ ಬಿಡುಗಡೆಗೊಂಡಿತು.

ಪ್ರೌಢಶಾಲೆ, ಪದವಿಪೂರ್ವ, ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದು ಮೂಲ ವಿಜ್ಞಾನದ ಬಗ್ಗೆ ಚರ್ಚಿಸುವರು. ಪದವಿ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ತಾಂತ್ರಿಕ ಅಧ್ಯಯನ, ವೃತ್ತಿಪರವಾಗಿ ಮುಂದುವರೆಯುವ ಹಾಗೂ ವ್ಯವಹಾರ ನಿರ್ವಹಣೆ ಕುರಿತು ಚರ್ಚಿಸುವರು ಎಂದರು.

ಐದು ದಿನ ನಡೆಯುವ ಕಾರ್ಯಕ್ರಮದಲ್ಲಿ ನೊಬೆಲ್ ಪುರಸ್ಕೃತರ ಹಾಗೂ ವಿಜ್ಞಾನಿಗಳು, ತಾಂತ್ರಿಕ ಪರಿಣತರು ಹಾಗೂ ಉದ್ಯಮಿಗಳು ಜತೆ ಚರ್ಚಾಗೋಷ್ಠಿ ನಡೆಸಿಕೊಡುವರು. ವಿಜ್ಞಾನ ಮಾದರಿ ವಸ್ತುಪ್ರದರ್ಶನ, ತಾಂತ್ರಿಕ ವಸ್ತುಪ್ರದರ್ಶನ, ಗಣಿತ ವಸ್ತುಪ್ರದರ್ಶನ, ಏರ್ ಶೋ, ಡ್ರೋಣ್‌ಗಳ ಪ್ರದರ್ಶನ ನಡೆಯಲಿದ್ದು, ಪ್ರೌಢಶಾಲೆ, ಪಿಯುಸಿ, ಪದವಿ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಎಂಜಿನಿಯರಿಂಗ್ ಹಾಗೂ ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳು ಪಾಲ್ಗೊಳ್ಳುವರು, ಜತೆಗೆ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು. ಡಾ.ಮಹೇಶ್ ಭೂಷಿ, ವಸಂತ ಕೇದಿಗೆ ಮೊದಲಾದವರಿದ್ದರು.